


2010ರಲ್ಲಿ ದೇವನೂರು ಚಾರಿಟಬಲ್ ಟ್ರಸ್ಟ್ ವತಿಯಿಂದ ಡಿ.ಆರ್. ಪಾಂಡುರಂಗ ಅವರಿಂದ ಲಕ್ಷ್ಮೀಶನ ಭಾರತವನ್ನೂ ಅದೇ ಬಿ. ಶಿವಮೂರ್ತಿಶಾಸ್ತ್ರಿಗಳ ಪ್ರಸ್ತಾವನೆಯೊಡನೆ ಮತ್ತು ಹಿರಿಯ ವಿದ್ವಾಂಸರಾದ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಕಾವ್ಯ ಪ್ರವೇಶಿಕೆಯ ಮಾತುಗಳೊಡನೆ ಹೊರ ಬಂದಿತು. ಕಾಲಾನುಕ್ರಮದಲ್ಲಿ ಈ ಪ್ರಕಟಣೆಗಳನ್ನೆಲ್ಲ ನೋಡಿದರೆ ಲಕ್ಷ್ಮೀಶನು ಪಂಡಿತಮಂಡಳಿ ಮತ್ತು ಗ್ರಾಮೀಣರ ನಡುವೆ ಒಬ್ಬ ಜನಪ್ರಿಯ ಕವಿಯಾಗಿದ್ದನೆಂಬುದು ಸ್ಪಷ್ಟ.

★★★

ಇನ್ನು ಕೃತಿಯ ವಸ್ತು ವಿಷಯ ಕುರಿತಂತೆ ಗ್ರಾಮೀಣ ಓದುಗ, ಕೇಳುಗರಲ್ಲಿಲ್ಲದ ಮತ್ತು ಸಾಂಪ್ರದಾಯಿಕ ಓದುಗರಲ್ಲಿಯೂ ಕಾಣದ ಒಂದು ಅಭಿಪ್ರಾಯ ಆಧುನಿಕ ವಿಮರ್ಶಕ, ವಿದ್ವಾಂಸರಲ್ಲಿ ಮೂಡಿರುತ್ತದೆ. ಈ ಕೃತಿ ಕುರುಕ್ಷೇತ್ರದ ಮಹಾದುರಂತದ ಪಾಪವನ್ನು ಕಳೆದುಕೊಳ್ಳಲು ಅಶ್ವಮೇಧದಂಥ ಮತ್ತೊಂದು ಯುದ್ಧ ದುರಂತವನ್ನು ಹೇಳುತ್ತದೆಂಬುದು. ಅಂದರೆ ಗೋತ್ರವಧೆಯ ಪಾಪವನ್ನೂ ಕಳೆದುಕೊಳ್ಳಲು ಮತ್ತೊಬ್ಬರ ವಧೆಯಲ್ಲಿ ತೊಡಗುವುದು. ಆದರೆ ಮೂಲದಲ್ಲಿ ಜೈಮಿನಿ ಮಹರ್ಷಿಯು ರಚಿಸಿದ 68 ಅಧ್ಯಾಯಗಳ 5194 ಶ್ಲೋಕಗಳ ದೀರ್ಘ ಕಾವ್ಯವನ್ನು ಲಕ್ಷ್ಮೀಶ ಅದೆಷ್ಟು ಆರ್ದ್ರ, ಕರುಣಭಾವದಲ್ಲಿ ರಚಿಸಬಹುದೋ ಅಂಥದೊಂದು ಪ್ರಯತ್ನ ಮಾಡಿರುವುದನ್ನು ಗಮನಿಸಬೇಕು. ಸ್ತ್ರೀ ಪಕ್ಷಪಾತಿಯಾದ ಲಕ್ಷ್ಮೀಶನಿಗೆ ಹಿಂಸೆಯ ಬಗೆಗೇ ಒಂದು ಅಳುಕು ಇರುವಂತೆ ಅವನ ಹೇಳಿಕೆಗಳಿಂದಲೇ ತಿಳಿದುಬರುತ್ತದೆ. ಕಾವ್ಯದಾರಂಭದಲ್ಲಿ ಸೌಭರಿ ಮುನಿ ಅರ್ಜುನನಿಗೆ ಬಂಧುಗಳನ್ನು ಕೊಂದ ನಂತರದಲ್ಲಿ ದೈವಧ್ಯಾನ ಬಿಟ್ಟು ವಾಜಿಮೇಧವನ್ನು ಮಾಡುವೆನೆಂದು ಗರ್ದಭಾಕೃತಿಯ ಕುದುರೆಯೊಡನೆ ಬಂದೆಯಲ್ಲಾ ಎಂದು ಹಂಗಿಸುತ್ತಾನೆ. ಅಷ್ಟೇ ಅಲ್ಲ ಯಜ್ಞಾಶ್ವವನ್ನು ವಧಿಸುವ ಪ್ರಕ್ರಿಯೆಯಲ್ಲಿಯೂ ಕವಿ ತನ್ನ ಅಂತರಂಗದ ಸಮಾಧಾನಕ್ಕಾಗಿ ಕುದುರೆಯ ವಧೆಯ ಕ್ರಮವನ್ನೇ ಬದಲಾಯಿಸುತ್ತಾನೆ. ಆದರೆ ಲಕ್ಷ್ಮೀಶ ಕವಿಯ ಆಸುಪಾಸಿನಲ್ಲೇ ಇದ್ದು ಅಶ್ವಮೇಧಿಕ ಭಾರತ ಕಥನವನ್ನು ಬರೆದ ತಿಮ್ಮಣ್ಣ ಕವಿ ಧರ್ಮರಾಯನು ಯಜ್ಞಾರ್ಥವಾಗಿ ಅಲ್ಲಿದ್ದ ನೂರಾರು ಪಶು, ಅಶ್ವಗಳನ್ನು ವಧಿಸಲು ಆಜ್ಞಾಪಿಸಿದನೆಂದು ಹೇಳುತ್ತಾನೆ. ಲಕ್ಷ್ಮೀಶನಾದರೋ ಯಜ್ಞಕ್ಕೆ ಕರೆ ತಂದಿದ್ದ ಎಲ್ಲ ಪಶು, ಅಶ್ವಗಳನ್ನು ಬಿಡಿಸಿ ನಿಜಮನುಷ್ಯನಾದನಂತೆ. ಹೀಗೆ ಲಕ್ಷ್ಮೀಶನು ಸಾಂಪ್ರದಾಯಿಕವಾಗಿ ಯುದ್ಧ ವಿವರಗಳನ್ನು ಅನಿವಾರ್ಯವೆಂಬಂತೆ ಪ್ರಸ್ತಾಪಿಸಿದ್ದರೂ, ಕಥನದ ಸಂದಿಗ್ಧ ಪ್ರಸಂಗಗಳಲ್ಲಿ ಅದೆಷ್ಟು ಮಾನವೀಯತೆ ಕರುಣೆಯನ್ನು ತೋರುತ್ತಾನೆಂಬುದನ್ನು ಗಮನಿಸಬೇಕು.

ಕನ್ನಡ ಪರಂಪರೆಯಲ್ಲಿ ಸಂದುಹೋದ ಯಾವನೇ ಕವಿ ಎಷ್ಟೇ ಮಾನವೀಯ ಚಿಂತನೆಗಳನ್ನು, ಜೀವಪರ ಧೋರಣೆಗಳನ್ನು ಹೊಂದಿದ್ದರೂ, ಆಯಾ ಕವಿ ಅನುಸರಿಸಿದ ಧರ್ಮ, ದೈವನಿಷ್ಠೆ ಇವುಗಳನ್ನು ಮಾತ್ರ ಬಿಟ್ಟುಕೊಟ್ಟಂತೆ ತೋರುವುದಿಲ್ಲ. ತಾವು ಅನುಸರಿಸಿದ ಧಾರ್ಮಿಕ ನಿಷ್ಠೆಯನ್ನು ಇತರರು ಅನುಸರಿಸಿದರೆ ಮಾತ್ರ ಜೀವಕ್ಕೆ ಮುಕ್ತಿ ಎನ್ನುತ್ತಾರೆ. ಇದರ ಸಮರ್ಥನೆಗಾಗಿ ತಮ್ಮ ಕಥಾ ರಚನೆಗಳಲ್ಲಿ ಯಾವುದೇ ಪವಾಡಗಳನ್ನು ಸೃಷ್ಟಿಸಿಬಿಡುವುದುಂಟು. ಕೊಪ್ಪರಿಗೆಯಲ್ಲಿ ಉರಿದೆದ್ದು ಮರಳುವ ಎಣ್ಣೆಗೆ ಬಿದ್ದರೂ ದೈವಭಕ್ತನಿಗೆ ಏನೇನೂ ಊನವಾಗದಂತೆ ಎದ್ದು ಬರುತ್ತಾನೆ. ಈ ಥರದ ಪವಾಡ ಕಥೆಗಳು ಕನ್ನಡದ ಎಲ್ಲ ಕಾವ್ಯಕಥನಗಳಲ್ಲಿ ಹೇರಳವಾಗಿ ಕಂಡುಬಂದರೂ ಅವುಗಳ ಅಂತರಂಗದಲ್ಲೇ ಒಂದು ಸತ್ಯದ ಎಳೆಯೂ ಮಿಳಿತವಾಗಿರುತ್ತದೆ.

ರಾಘವಾಂಕನ ಹರಿಶ್ಚಂದ್ರ ಕಾವ್ಯವು ಹಲವು ಕಲ್ಪನೆಗಳ, ಪೂರ್ವನಿಯೋಜಿತ ಮಾರ್ಪಾಡುಗಳ ಕಥಾಸಂವಿಧಾನವಾದರೂ ಕಾವ್ಯದ ಫಲಶ್ರುತಿ ಹೇಳುವ 'ಸತ್ಯವೆಂಬುದೇ ಹರನು, ಹರನೆಂಬುದೇ ಸತ್ಯ' ಎಂಬೀ ಮಾತು ಲೋಕ ವಿಧಿತವಾದುದು. ಸತ್ಯದ ಹಾದಿ ಅದೆಷ್ಟು ಕಠಿಣ ಎಂಬ ಕಥೆಯನ್ನು ಕಲ್ಪನೆಯ